ಅಸಲು ದಾವೆ ಸಂಖ್ಯೆ -283/2014
ಪಿ.ಡಬ್ಲ್ಯೂ - 01
ದಿನಾಂಕಃ 19-02-2026
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಂ ಎಸ್ ಎಂ ವಕೀಲರಿಂದ

ಸವಣೂರ ತಾಲೂಕ ಸವಣೂರ ಹದ್ದಿಯ ರಿ.ಸ.ನಂ. 126 ಮತ್ತು 127 ಇವು ಪಂಚಪ್ಪನ ಮಾಲ್ಕಿಯ ಆಸ್ತಿಗಳಾಗಿದ್ದವು ಎಂದರೆ ಸರಿಯಲ್ಲ. ಮುಂದುವರೆದು ನಿಂಗಪ್ಪ ಶಿವಪ್ಪ ಹಾವಣಗಿ ಅವರ ಆಸ್ತಿಗಳಾಗಿದ್ದವು. ಪಂಚಪ್ಪ ನಿಂಗಪ್ಪ ಹಾವಣಗಿ ಸದರಿ ಸರ್ವೆ ನಂ. 126 ಮತ್ತು 127 ಆಸ್ತಿಗಳಿಗೆ ಮಾಲೀಕನಿದ್ದನು ಎಂದರೆ ಸರಿಯಲ್ಲ. ಪಂಚಪ್ಪ ನಿಂಗಪ್ಪ ಹಾವಣಗಿ ರವರು ಸರ್ವೆ ನಂ. 127 ನ್ನು ಕಂಬಾಳಯ್ಯ ಸಂಗಯ್ಯ ಕಂಬಾಳಿಮಠ ರವರಿಗೆ ದಿಃ 26-07-1968 ರಂದು ಲಾವಣಿ ನೊಂದು ಪತ್ರವನ್ನು ಮಾಡಿಕೊಟ್ಟಿದ್ದರು ಎಂದರೆ ಮಾಡಿದ್ದರು. ಮುಂದುವರೆದು ಅದಕ್ಕೂ ಮೊದಲು ನಮಗೆ ಭಕ್ಷಿಸ ಮಾಡಿಕೊಟ್ಟಿದ್ದರು. ಕಂಬಾಳಯ್ಯ ಸಂಗಯ್ಯ ಕಂಬಾಳಿಮಠ ರವರು ದಿಃ 26-07-1968 ರಿಂದ 1974 ರ ವರೆಗೆ ಸರ್ವೆ ನಂ. 127 ನ್ನು ತಮ್ಮ ಸ್ವಾಧಿನದಲ್ಲಿ ಇಟ್ಟುಕೊಂಡು ಲಾವಣಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಸರ್ವೆ ನಂ. 126 ವಿಸ್ತೀರ್ಣ 21 ಗುಂಟೆ ಪಂಚಪ್ಪ ಹಾವಣಗಿ ರವರು ಇಟ್ಟುಕೊಂಡು ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ಮುಂದುವರೆದು ಎರಡು ಆಸ್ತಿಗಳನ್ನು ಒಟ್ಟಿಗೆ ದಾನ ಮಾಡಿರುತ್ತಾರೆ. ಸದರಿ ದಾನ ಪತ್ರ ಕಾನೂನು ಬದ್ಧವಾಗಿ ಇಲ್ಲ ಎಂದು ಮೊಟಕುಗೊಳಿಸಲಾಗಿರುತ್ತದೆ ಎಂದರೆ ಸರಿಯಲ್ಲ.

ನಿಂಗಪ್ಪ ಶಿವಪ್ಪ ಹಾಣಗಿ ಮತ್ತು ನಿಮ್ಮ ತಂದೆ ಚನ್ನಬಸಪ್ಪ ಹಾವಣಗಿ ರವರ ನಡುವೆ ತಹಶೀಲ್ದಾರ ಕಚೇರಿಯಲ್ಲಿ ಈ ದಾನ ಪತ್ರದ ಬಗ್ಗೆ ಆದ ವ್ಯಾಜ್ಯದ ಬಗ್ಗೆ ನಿಮಗೆ ವಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸರಿ. ಚನ್ನಬಸಪ್ಪ ಹಾವಣಗಿ ರವರು ನಿಮ್ಮ ಮತ್ತು ನಿಮ್ಮ ಸಹೋದರನ ಅಲ್ಪವಯಿ ಸಂರಕ್ಷಣಧಾರರು ಆಗಿದ್ದರು ಎಂದರೆ ಸರಿ. ತಹಶೀಲ್ದಾರ ಪ್ರಕರಣವು ಮೋಟಕುಗೊಳಿಸಿದ ನಂತರ, ನೀವು ಮತ್ತು ನಿಮ್ಮ ಸಹೋದರ ವಯಸ್ಕರರಾದನಂತರ ಅಂದರೆ 74-75ರ ನಂತರ ತಹಶೀಲ್ದಾರ ಆದೇಶವನ್ನು ಏನಾದರೂ ಪ್ರಶ್ನಿಸಿದ್ದೀರಾ ಎಂದರೆ ಇಲ್ಲ. ಮುಂದುವರೆದು 2012 ರಲ್ಲಿ ಪ್ರಶ್ನಿಸಿರುತ್ತೇವೆ. 2012 ರಲ್ಲಿ ನೀವು ಖಾತೆ ಬದಲಾವಣೆ ಮಾಡುವ ವೇಳೆಯಲ್ಲಿ, ಪಂಚಪ್ಪನ ಮಕ್ಕಳಿಗಾಗಿ, ಪ್ರತಿವಾದಿಗಾಗಲಿ ಮತ್ತು ಕಂಬಾಳಯ್ಯ ಕಂಬಾಳಿಮಠ ಮತ್ತು ಅವರ ಸಹೋದರಗಾಗಲೀ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ

ಮಾಡಿರುತ್ತೇನೆ. ಅವರನ್ನು ಪಕ್ಷಗಾರರನ್ನಾಗಿ ಮಾಡಿದ್ದೇವೆ ಎಂದು ತೋರಿಸಲು ಯಾವುದಾದರೂ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಏಕೆಂದರೆ ಅವರನ್ನು ಅವಶ್ಯಕ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಆದ ಕಾರಣ ಸದರಿ ದಾಖಲೆಯನ್ನುನೀವು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನೀವು ತಹಶೀಲ್ದಾರ ಕಚೇರಿಯಲ್ಲಿ ನಿಮ್ಮ ಹೆಸರನ್ನು ಖೊಟ್ಟಿಯಾಗಿ ನಮೂದು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಲಾವಣಿ ಪತ್ರದ ಪ್ರಕಾರ ಟೆನನ್ಸಿ ಕಾಯ್ದೆ ಅಡಿಯಲ್ಲಿ ರೈತಪಿ ಹಕ್ಕಿನ ನಾತೆಯಿಂದ ಕಂಬಾಳಯ್ಯ ಕಂಬಾಳಿಮಠ ರವರನ್ನು ಸರ್ವೆ ನಂ. 127 ಕ್ಕೆ ಕಬ್ಜಾದಾರರು ಮತ್ತು ಮಾಲೀಕರು ಎಂದು ಘೋಷಣೆ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿಯಾಗಿ ಸರ್ವೆ ನಂ. 126 ಕ್ಕೆ ಪಂಚಪ್ಪ ಹಾವಣೆಗಿ ರವರನ್ನು ಸ್ಥಾನಿಕ ಚೌಕಾಸಿ ಮಾಡಿ ಕಬ್ಜಾದಾರರು ಮತ್ತು ಮಾಲೀಕರು ಎಂದು ಘೋಷಣೆ ಮಾಡಿದರು ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ. 127 ಕ್ಕೆ ಕಂಬಾಳಯ್ಯ ಕಂಬಾಳಿಮಠ ರವರು ಮಾಲೀಕರು ಎಂದು ಘೋಷಣೆ ಮಾಡಿದ ಆದೇಶವನ್ನು ಪ್ರಶ್ನಿಸಿ ನೀವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP ನಂ. 106010/2014 ನ್ನು ಪ್ರಶ್ನಿಸಿರುತ್ತೀರಿ ಎಂದರೆ ಸರಿ. ಸದರಿ WP ನಂ. 106010/2014 ದಿಃ 11-12-2025 ರಂದು ವಜಾ ಆಗಿರುತ್ತದೆ ಎಂದರೆ ಸರಿ. ಯಾವ ಆಧಾರದ ಮೇಲೆ WP ನಂ. 106010/2014 ದಾಖಲು ಮಾಡಿದ್ದೀರಿ ಎಂದರೆ ನಾವು ಮಾಲೀಕರು ಅಲ್ಲ ಎಂದು ಬಂದ ಆದೇಶದ ವಿರುದ್ದ ನಾವು WP ನಂ. 106010/2014 ನ್ನು ಮಾಡಿರುತ್ತೇವೆ.ರೈತಾಪಿ ಹಕ್ಕಿನ ಅಡಿಯಲ್ಲಿ ಕಂಬಾಳಯ್ಯ ಕಂಬಳಿಮಠ ರವರು ಸರ್ವೆ ನಂ. 127 ರ ಮಾಲೀಕರು ಎಂದು ಮಾಡಿದ ಆದೇಶವನ್ನು ನೀವು ಪ್ರಶ್ನಿಸಿರುತ್ತೀರಿ ಎಂದರೆ ಸರಿ.

ಸರ್ವೆ ನಂ. 126 ಮತ್ತು 127 ದಿಃ 06-09-1965 ಡ ನಂ. 3377 ರಂತೆ ಪಂಚಪ್ಪ ಹಾವಣಗಿ ರವರ ಹೆಸರು ದಾಖಲೆ ಆಯಿತು ಎಂದರೆ ಅದು ಖೊಟ್ಟಿ ದಾಖಲೆ ಆಗಿರುತ್ತದೆ. ಇದೇ ಪ್ರಕಾರ ನಿಮ್ಮ ತಂದೆ ಮತ್ತು ಆತನ ಸಹೋದರ ಮತ್ತು ಪಂಚಪ್ಪ ಹಾವಣಗಿ ರವರ ಹೆಸರುಗಳು ಇತರೇ ಡ ನಂಬರಗಳ ಮುಖಾಂತರ ದಾಖಲು ಆದವು ಎಂದರೆ ಅವರುಗಳಿಗೆ ಬಂದ ಆಸ್ತಿಗಳಿಗೆ ದಾಖಲು ಆಗಿರುತ್ತೇವೆ. ಅದೇ ರೀತಿಯಾಗಿ ನಿಂಗಪ್ಪನು ನೀಡಿದ ವರದಿ ಪ್ರಕಾರ ಮುರಿಗೆಪ್ಪ, ಫಕ್ಕೀರಪ್ಪ, ಪಂಚಪ್ಪ, ತೋಟಪ್ಪ, ಚನ್ನಬಸಪ್ಪ ರವರ ಹೆಸರಿನಲ್ಲಿ ಬೇರೆ ಬೇರೆ ಡ ನಂಬರಗಳು ಆಗಿ ನಮೂದು ಆದವು ಎಂದರೆ ಸರಿ.

ಮುಂದುವರೆದು ದಾವಾ ಆಸ್ತಿಗಳು ನಮಗೆ ಭಕ್ಷಿಸ ನೀಡಿರುತ್ತಾರೆ.

1966 ರಂದು ನಿಮಗೆ ಭಕ್ಷಿಸ ಆದ ನಂತರ ನಿಮ್ಮ ಹೆಸರು ದಾಖಲು ಆಗಿದೆ ಎಂದು ತೋರಿಸಲು ಯಾವುದಾದರೂ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ನಾವು ಅರ್ಜಿ ಕೊಟ್ಟಿದ್ದೇವು ಆದರೆ ಅವರು ನಮ್ಮ ಹೆಸರನ್ನು ದಾಖಲು ಮಾಡಿರುವುದಿಲ್ಲ. ನಿಮ್ಮ ಹೆಸರು ದಾಖಲು ಮಾಡಿಲ್ಲ ಎಂದು ಎಲ್ಲಾದರೂ ಅದನ್ನು ಪ್ರಶ್ನಿಸಿದ್ದೀರಾ ಎಂದರೆ 2012 ರಲ್ಲಿ ಪ್ರಶ್ನಿಸಿದ್ದೇವೆ. 2012 ರ ಹಿಂದೆ ಎಲ್ಲಾದರೂ ಪ್ರಶ್ನಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ಪಂಚಪ್ಪ ಪೋತಿ ಯಾದ ನಂತರ ಸರ್ವೆ ನಂ. 126 ಕ್ಕೆ ಅವರ ವಾರಸುದಾರರ ಹೆಸರುಗಳು ಕಂದಾಯ ದಾಖಲೆಗಳಲ್ಲಿ ನಮೂದಾಯಿತು ಎಂದರೆ ಅದು ಖೊಟ್ಟಿ ದಾಖಲೆ ಇರುತ್ತದೆ. ಪಂಚಪ್ಪ ವಾರಸುದಾರರು ಪ್ರತಿವಾದಿ ಸಿದ್ದಪ್ಪ ರವರಿಗೆ ಪಾಲುದಾರಿಕೆ ಮುಖಾಂತರ ಸದರಿ ಆಸ್ತಿಯನ್ನು ಬಿಟ್ಟುಕೊಟ್ಟರು ಎಂದರೆ ಅದು ಖೊಟ್ಟಿಯಾಗಿ ಇರುತ್ತದೆ. ಸದರಿ ಡ ಗಳನ್ನು ಮತ್ತು ಕಂದಾಯ ದಾಖಲೆಗಳನ್ನು ಎಲ್ಲಾದಾರೂ ಪ್ರಶ್ನೆ ಮಾಡಿದ್ದೀರಾ ಎಂದರೆ ಇಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.